




'ಪಂಚ್' ಪತ್ರಿಕೆಯಲ್ಲಿ ಪ್ರಕಟವಾದ ವ್ಯಂಗ್ಯಚಿತ್ರ 'ಎಲ್ಲಿದೆ ಬ್ಯಾಸಿಲಸ್?'



ರೋಗಾಣು ಗಂಡೋ ಹೆಣ್ಣೋ ಎನ್ನುವ ಜಿಜ್ಞಾಸೆಯ ಕಾರ್ಟೂನ್

ಫ್ಲೂ ಕಾಡಿತು. ಕೆಲವರು ಅದಕ್ಕೆ ಬಲಿಯಾದರು. ಬದುಕುಳಿದವರಲ್ಲಿ ಪ್ರಮುಖರಾದವರೆಂದರೆ ಅಮೆರಿಕದ ಪ್ರೆಸಿಡೆಂಟ್ ವುಡ್‌ರೋ ವಿಲ್ಸನ್, ಬ್ರಿಟಿಷ್ ಪ್ರೈಮ್ ಮಿನಿಸ್ಟರ್ ಡೇವಿಡ್ ಲಾಯ್ಡ್ ಜಾರ್ಜ್, ಲೇಖಕ ಜಾನ್ ಸ್ಟೀನ್‌ಬೆಕ್, ನಟಿ ಲಿಲಿಯನ್ ಗಿಶ್, ವಾಲ್ಟ್ ಡಿಸ್ನಿ ಮುಂತಾದವರು.




ಜಂಬಕೋರ ಸೂಕ್ಷ್ಮಾಣು ಡಾನ್ ಜ್ವಾನ್‌ನ ಪ್ರತಿರೂಪ

ಭಾರತದಲ್ಲಿ ಮಹಾತ್ಮ ಗಾಂಧಿಯವರನ್ನೂ ಸಹ ಈ ಫ್ಲೂ ಕಾಡಿತ್ತು.

ರಷಿಯನ್ ಫ್ಲೂ ಸಮಯದಲ್ಲಿಯೇ ರಿಚರ್ಡ್ ಫೀಫರ್ ಎಂಬ ವಿಜ್ಞಾನಿ ಆ ಫ್ಲೂಗೆ ಕಾರಣವಾದ ಬ್ಯಾಕ್ಟೀರಿಯಾ ಕಂಡುಹಿಡಿದಿರುವುದಾಗಿ ಘೋಷಿಸಿದ್ದ. ಆದರೆ ಅದು ಬ್ಯಾಕ್ಟೀರಿಯಾ ಆಗಿರಲಿಲ್ಲ ಮತ್ತು ವೈರಸ್‌ಗಳ ಬಗೆಗೆ ಆಗ ಜನರಿಗೆ ಅಷ್ಟೊಂದು ಮಾಹಿತಿಯೂ ಇರಲಿಲ್ಲ.

ಆಗಿನ ವ್ಯಂಗ್ಯಚಿತ್ರಕಾರರು ಫ್ಲೂ ಉಂಟುಮಾಡುವ ಜೀವಿಯನ್ನು ಕೀಟದ ಹಾಗೆ ಅಥವಾ ಮತ್ತಾವುದೋ ಅವರ್ಣನೀಯ ಜೀವಿಯ ಹಾಗೆ ಚಿತ್ರಿಸಿದ್ದಾರೆ. 1918ರ ಜೂನ್ 7ರಂದು ಸ್ಪೇನ್‌ನ 'ಎಲ್ ಸೋಲ್' ಪತ್ರಿಕೆಯಲ್ಲಿ ಪ್ರಕಟವಾದ ಲೂಯಿಸ್ ಬಗೇರಿಯಾರವರ ವ್ಯಂಗ್ಯಚಿತ್ರದಲ್ಲಿ ವಿಚಿತ್ರ ರೂಪ ಹೊಂದಿರುವ ರೋಗಾಣುವಿಗೆ ಜೀವಶಾಸ್ತ್ರಜ್ಞರು ಕೈ ಮುಗಿಯುತ್ತಾ 'ಮಹಾತ್ಮನೇ, ನೀನು ಯಾರೆಂದು ಹೇಳು!' ಎನ್ನುತ್ತಿದ್ದಾರೆ. ಅದೇ ಸಮಯದಲ್ಲಿ 'ಲಂಡನ್ನಿನ ಆಸ್ಪತ್ರೆಯೊಂದರಲ್ಲಿ ಇನ್‌ಫ್ಲುಯೆಂಜಾ ಬ್ಯಾಸಿಲಸ್ ಕಂಡುಹಿಡಿಯಲಾಗಿದೆ' ಎಂಬ ಸುದ್ದಿ ಬ್ರಿಟನ್ನಿನಲ್ಲಿ ಪ್ರಕಟವಾದಾಗ 'ಪಂಚ್' ಪತ್ರಿಕೆಯಲ್ಲಿ ಪ್ರಕಟವಾದ ವ್ಯಂಗ್ಯಚಿತ್ರವೊಂದರಲ್ಲಿ ವೈದ್ಯರು, ದಾದಿಯರು ಹಾಗೂ ಇತರರು ಆ 'ಬ್ಯಾಸಿಲಸ್' ಅನ್ನು ರೋಗಿಗಳ ಮಂಚಗಳ ಕೆಳಗೆ ಇದೆಯೇನೋ ಎಂಬಂತೆ ನೋಡುತ್ತಿದ್ದರೆ, ಕೆಲವರು ಕೈಗಳಲ್ಲಿ ದೊಣ್ಣೆ ಹಿಡಿದು, ತೋಳು ಮಡಚಿ ಆ 'ಬ್ಯಾಸಿಲಸ್' ಇಲಿಯೋ, ಹೆಗ್ಗಣವೋ ಎಂಬಂತೆ ಅದು ಹೊರಗೆ ಬಂದರೆ ಹೊಡೆಯಲು ಸಿದ್ಧವಾಗಿರುವಂತಿದ್ದಾರೆ.

ಸ್ಪೇನ್‌ನ ಒಂದು ಪ್ರಖ್ಯಾತ ಹಾಗೂ ಜನಪ್ರಿಯ ವ್ಯಕ್ತಿ ಪಾತ್ರ ಡಾನ್ ಜ್ವಾನ್ ಎಂಬುವನದು. ಆ ಪಾತ್ರ ಮೊದಲಿಗೆ ರಚಿತವಾದದ್ದು 1630ರಲ್ಲಿ, ಒಂದು ನಾಟಕದ ಮೂಲಕ. ಅವನೊಬ್ಬ ಕಚ್ಚೆಹರುಕ, ಸಿಕ್ಕ ಸಿಕ್ಕ ಹೆಣ್ಣುಗಳ ಹಿಂದೆ ಹೋಗುವವನು ಹಾಗೂ ತನ್ನ ಸಾಹಸಗಳ ಬಗ್ಗೆ ಮತ್ತಷ್ಟು ಉತ್ಪ್ರೇಕ್ಷೆಯಿಂದ ಎಲ್ಲರ ಬಳಿಯೂ ಕೊಚ್ಚಿಕೊಳ್ಳುವವನು. ಅಂತಹ ವ್ಯಕ್ತಿತ್ವ ಹೊಂದಿರುವವರನ್ನು ಮನೋವೈದ್ಯದಲ್ಲಿ 'ಡಾನ್ ಜ್ವಾನಿಸಂ ವ್ಯಕ್ತಿತ್ವ' ಎನ್ನುತ್ತಾರೆ. ಡಾನ್ ಹೆಣ್ಣುಗಳನ್ನು ಅರಸಿ ಮನೆಗಳ ಮಾಳಿಗೆ, ಗೋಡೆಗಳನ್ನೆಲ್ಲಾ ಸರಾಗವಾಗಿ ಹತ್ತುವ ಸಾಹಸ ಮಾಡುವವನು. ಅವನ ವ್ಯಕ್ತಿತ್ವ ಅವರ್ಣನೀಯವಾದದ್ದು ಮತ್ತು